# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

# ಎಸ್.ಸಿ. ನಂಃ 47/2024

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಪ್ರಭು | ಫ್ರಾಸಾಃ | 08 |
| **ತಂದೆಯ ಹೆಸರುಃ** | ವೆಂಕಟೇಶ | ಚಾಸಾಃ | 07 |
| **ವಯಸ್ಸುಃ** | 25 | ಪ್ರಮಾಣ ವಚನ ಭೋದಿಸಿದ ದಿನಾಂಕ: | 05-08-2025 |
| **ಉದ್ಯೋಗಃ** | ಖಾಸಗಿ | | |
| **ವಾಸ ಸ್ಥಳಃ** | ಶಿಡ್ಲಘಟ್ಟ | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿ ಗೊತ್ತು . 2 ವರ್ಷದ ಹಿಂದೆ ನಾನು ಬೇರೆ ಕೆಲಸದ ಮೇಲೆ ಪೋಲಿಸ್ ಠಾಣೆಗೆ ಹೋಗಿದ್ದಾಗ ಅಲ್ಲಿ ಆರೋಪಿ ಕೂಡ ಇದ್ದ. ಆತನಿಂದ ಈಗ ನನಗೆ ತೋರಿಸಿದ್ದ ಪೋನ್ ಅಮಾನತುಪಡಿಸಿಕೊಂಡರು. ಮಹಜರ್ ನ್ನು ನಿಪಿ-9 ಎಂದು, ಸಹಿಯನ್ನು ನಿಪಿ-9(ಎ) ಎಂದು ಹಾಗೂ ಪೋನ್ ನ್ನು ಮು.ಮಾ.07 ಎಂದು ಗುರುತಿಸಲಾಯಿತು. ನನಗೆ ಈ ಕೇಸಿನ ಬಗ್ಗೆ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ದಿ.22.06.2023 ರಂದು ಆರೋಪಿ ಚಾಸಾ-1 ರವರಿಗೆ ಅತ್ಯಾಚಾರ ಮಾಡಿದ ಬಗ್ಗೆ ಪೋಲಿಸರು ನನ್ನ ಸಮಕ್ಷಮ ಠಾಣೆಯಲ್ಲಿ ಆರೋಪಿ ಹಾಜರು ಪಡಿಸಿದ್ದ ಪೋನ್ ಅಮಾನತ್ತು

ಬಾಬ್ತು ನಿಪಿ-9 ಮಹಜರ್ ಜರುಗಿಸಿದಾಗ ಪಂಚಾನಾಗಿ ಸಹಿ ಮಾಡಿ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಕೀಲರಿಂದ ಪಾಟೀ ಸವಾಲು</u>**

ಪೋಲಿಸ್ ನನಗೆ ನೋಟಿಸ್ ಕೊಟ್ಟಿರಲಿಲ್ಲ. ನಿಪಿ-9 ರ ವಿಚಾರ ಓದಿ ಹೇಳಿದ್ದರು. ನಿಪಿ-9 ವಿಚಾರ ತಿಳಿಯದೇ ಪೋಲಿಸರ ಮಾತು ಕೇಳಿ ಸಹಿ ಮಾಡಿ ಸುಳ್ಳು ಹೇಳುತ್ತಿದ್ದೇನಂದರೆ ಸರಿಯಲ್ಲ.

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ05.08.2025

**(ಕೆ.ಎಂ.ರಾಜಶೇಖರ)**

ಸ್ಥಳಃ ಚಿಂತಾಮಣಿ

ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.